Drinking Water facilities for Hereadapur and other villages

439 SRI S. S. KAVI SHETTI (Hungund) Will the Minister for Rural Development and Panchayat Raj be pleased to state :—

(*a*) whether there is a Scheme before Government for supply of drinking water through taps from the Shingonagutti Village to Hire-Aadapur, Chikka Aadapur and gadi Sunkapura Villages;

(*b*) whether Government is aware of the fact this water is not fit for drinking purpose by the people and even by the Cattle of this area ;

(*c*) whether Government will take immediate action to supply drinking water through taps by taking suitable action for implementation of this work as this request is pending from a long time ?

SRI B. RAMAIAH (Minister for Rural Development and Panchayat Raj).—

(*a*) The District Development Council has recommended the the combined water supply Scheme for the year 1981-82 for supply of drinking water covering Hire-Aadapur, Chikka Aadapur. Hire Singanagutti and gadi Sunkapura Villages and the said Scheme is under consideration of the Government.

(*b*) It is learnt that the water is not fit for drinking purposes of the Bore-Wells which were established in these villages. Alternate source has already been found out. It is learnt that water is fit for drinking purpose. The Scheme of supplying water from the alternate source is under consideration of Government.

(*c*) The matter is under consideration of Government as mentioned in clause (b) above.

ಶ್ರೀ ಎಸ್. ಎಸ್. ಕವಿಶೆಟ್ಟಿ.—ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರೇ ಸಿಕ್ಕುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಆದರಲ್ಲೂ ಈ ಗಡಿ ಸುತ್ತ ಮುತ್ತ ಗ್ರಾಮಗಳಲ್ಲಿ ಕುಡಿಯುವ ನೀರು ಏನು ಇದೆ ಅದು ಕಲುಷಿತವಾಗಿರುವುದರಿಂದ ಅದನ್ನು ದನಗಳೂ ಕುಡಿಯುವುದಕ್ಕಾಗುವುದಿಲ್ಲ, ಜನಗಳೂ ಕುಡಿಯುವುದಕ್ಕಾಗುವುದಿಲ್ಲ. ಹಿಂದೆ ಈ ಹಳ್ಳಿಗಳಲ್ಲಿ ಕೊಳವೆ ಭಾವಿಗಳನ್ನು ತೆಗೆಸಿದ್ದು ಆ ನೀರು ಕುಡಿಯಲು ಯೋಗ್ಯವಾಗಿಲ್ಲವೆಂದು ತಿಳಿದುಬಂದು ಅದರ ಬದಲಾಗಿ ನಲ್ಲಿಗಳ ಮೂಲಕ ಆ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕೆನ್ನುವ ಯೋಜನೆ ಇತ್ತ? ಆ ಬಗ್ಗೆ ಸರ್ಕಾರದವರು ಏನು ನಿರ್ಣಯ ತೆಗೆದುಕೊಂಡಿದ್ದಾರೆ ಅನ್ನುವುದನ್ನು ದಯವಿಟ್ಟು ತಿಳಿಸುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಹಳ್ಳಿಗಳಲ್ಲಿ ಕೊಳವೆ ಭಾವಿಗಳನ್ನು ತೆಗೆಸಿದ್ದು ಆ ನೀರು ಕುಡಿಯಲು ಯೋಗ್ಯವಲ್ಲವೆಂದು, ಆ ನೀರಿನಿಂದ ಏನೂ ಪ್ರಯೋಜನವಿಲ್ಲವೆಂದು ತಿಳಿದು ಬಂದಿದ್ದರಿಂದ ಅದಕ್ಕೆ ಬೇರೆ ಇನ್ನೊಂದು ಪ್ರಪೋಸಲ್ಸ್ ಅನ್ನು ಡಿ. ಡಿ. ಸಿ. ಮೀಟಿಂಗ್‌ನಲ್ಲಿ ಇಟ್ಟು ಆ ಬಗ್ಗೆ ಒಂದು ತೀರ್ಮಾನ ತೆಗೆದುಕೊಂಡು ಅದನ್ನು ಸರ್ಕಾರದ ಮಂಜೂರಾತಿಗೆ ಕಳುಹಿಸಿದ್ದಾರೆ. ಆ ಬಗ್ಗೆ ಸರ್ಕಾರ ಇಷ್ಟರಲ್ಲೇ ಒಂದು ತೀರ್ಮಾನಕ್ಕೆ ಬರುತ್ತದೆ ಎಂದು ಹೇಳಬಹುದೇನೆ.

ಶ್ರೀ ಎಸ್. ಎಸ್. ಕವಿಶೆಟ್ಟಿ.—ಸ್ವಾಮಿ, ಹಿರೇ ಆದಾಪುರ, ಚಿಕ್ಕ ಆದಾಪುರ, ಹಿರೇಸಿಂಗನಗುತ್ತಿ, ಗಡಿಸುಂಕಾಪುರ ಈ ಗ್ರಾಮಗಳಿಗೆ ಕುಡಿಯುವ ನೀರನ್ನು ಪೂರೈಸುವ ಬಗ್ಗೆ ಒಂದು ಯೋಜನೆಯನ್ನು ಕಳುಹಿಸಲಾಗಿತ್ತು. ಆ ಯೋಜನೆಯನ್ನು ತೆಗೆದುಕೊಳ್ಳುವುದಾದರೆ ಸುಮಾರು ೧೦-೧೨ ಕಿಲೋ ಮೀಟರ್ ಒಳಗೆ ಇನ್ನೂ ೫-೬ ಹಳ್ಳಿಗಳು ಬರುತ್ತವೆ. ಅವರಿಗೂ ಕೂಡ ಕುಡಿಯುವ ನೀರನ್ನು ಪೂರೈಸಬಹುದು, ಆದರ ಬಗ್ಗೆ ತಾವು ಏನು ನಿರ್ಣಯ ತೆಗೆದುಕೊಂಡಿದ್ದೀರಾ ಅನ್ನುವುದನ್ನು ತಿಳಿಸುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಇದನ್ನು ಒದಲಿ ವ್ಯವಸ್ಥೆ ಮಾಡಿ ಅಲ್ಲಿ ಜನರಿಗೆ ನೀರು ಕುಡಿಯುವುದಕ್ಕೆ ತಕ್ಕ ವ್ಯವಸ್ಥೆ ಮಾಡಿಕೊಡಬೇಕು ಅನ್ನುವುದು ಸರ್ಕಾರಕ್ಕೆ ಕಂಡು ಬಂದಿದೆ ಇದರ ಬಗ್ಗೆ ಪೂರ್ತಾ ತನಿಖೆಯಾದ ಮೇಲೆ ಅಲ್ಲಿ ಒಳ್ಳೆಯ ನೀರು ಸಿಕ್ಕುತ್ತದೆ ಎಂದು ತಿಳಿದು ಆದಕ್ಕಾಗಿ ೩ ಲಕ್ಷ ರೂಪಾಯಿಯ ಒಂದು ಅಂದಾಜು ತಯಾರು ಮಾಡಿ ಡಿ.ಡಿ.ಸಿ. ಮೀಟಿಂಗ್‌ನಲ್ಲಿ ಒಪ್ಪಿಗೆ ಪಡೆದಿದ್ದಾರೆ. ಆ ಯೋಜನೆ ಬಗ್ಗೆಯೂ ಕೂಡ ಸರ್ಕಾರ ಇಷ್ಟರಲ್ಲೇ ಒಂದು ತೀರ್ಮಾನಕ್ಕೆ ಬರುತ್ತದೆ.

ಶ್ರೀ ಎಸ್. ಎಸ್. ಕವಿಶೆಟ್ಟಿ.—ಜನರಿಗೆ ಆಹಾರ ಎಷ್ಟು ಮುಖ್ಯವೋ ನೀರೂ ಕೂಡ ಅಷ್ಟೇ ಮುಖ್ಯ. ಆದುದರಿಂದ ದಯಮಾಡಿ ಆ ಜನರಿಗೆ ಇರತಕ್ಕಂಥಾ ಈ ಆಲೆಯನ್ನು ಆದಷ್ಟು ಬೇಗ ಪೂರೈಸುತ್ತೀರಾ?

ಶ್ರೀ ಕಾಗೋಡು ತಿಮ್ಮಪ್ಪ.—ಖಂಡಿತವಾಗಿಯೂ ತಾವು ಹೇಳಿದ ವಿಚಾರವನ್ನು ಗಮನಿಸುತ್ತೇನೆ.

Supply of Dialysis Machines to Hospitals.

494 SRI V. V. PATTAR (Jamakhandi) Will the Minister for Health and Family Welfare be pleased to state:—

(*a*) whether the Government are aware of the need for a Dialysis Machine in Karnataka which is a life saving Machine;

(*b*) whether the Government propose to give Dialysis machines to hospitals like Bowring, Victoria at Bangalore and K.M.C. Hospital at Hubli;

(*c*) whether the Government sanction them in this year only (1981-82)?

SRI A. K. ABDUL SAMAD (Minister for Health and Family Welfare).—

(*a*) Yes.

(*b*) Yes.

(*c* Orders have been placed to supply one unit each to Victoria Hospital, Bangalore and K.R. Hospital, Mysore.

ಶ್ರೀ ವಿ. ವಿ. ಪತ್ತಾರ್.—ಸ್ವಾಮಿ, ಮಾನ್ಯ ಮಂತ್ರಿಗಳು ಈ ಪ್ರಶ್ನೆಯ (ಇ)ಗೆ ಉತ್ತರವಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಹಾಗೂ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಒಂದೊಂದು dialysis ಯಂತ್ರವನ್ನು ಸರಬರಾಜು ಮಾಡಲು ಕೋರಿಕೆಯನ್ನು ಸಲ್ಲಿಸಲಾಗಿದೆ ಎಂದು ಹೇಳಿದ್ದಾರೆ. ಆದರೂ ಇನ್ನೂ ಸರಬರಾಜು ಮಾಡಿಲ್ಲಾ. ಇಷ್ಟು ವಿಳಂಬ ಆಗುವುದು ಏತಕ್ಕೆ ಸ್ವಾಮಿ? ತಕ್ಷಣ ಈ ಕೆಲಸ ಮಾಡಿಕೊಡುತ್ತೀರಾ? ಮತ್ತು ನಮ್ಮ ಭಾಗದ ಹುಬ್ಬಳ್ಳಿ ಕೆ.ಎಂ.ಸಿ ಆಸ್ಪತ್ರೆಗೆ ಆದೇರೀತಿ ಒಂದು ಡೈಆಲಿಸಿಸ್ ಮಿಷನ್ ಕೊಡುತ್ತೀರಾ ಎಂದು ಕೇಳುತ್ತೇನೆ. ಏತಕ್ಕೆಂದರೆ ಆ ದೂರದ ಪ್ರದೇಶದಿಂದ ಈ